30/35

ಓಂ



ಶ್ರೀ ಸದ್ಗುರು ಸಾಯಿ ಶಂಕರರ ಹಿತವಚನಗಳು

1. ಆಕಾರ ರಹಿತ ಶಕ್ತಿ, ಸ್ವರೂಪಿಯಾದ ಭಗವಂತನು ತನ್ನ ಸಂಕಲ್ಪ ಮಾತ್ರದಿಂದಲೇ ಜಗತ್ತನ್ನು ಸೃಷ್ಟಿಸಿ ಸರ್ವ ಜೀವರಾಶಿಗಳಲ್ಲಿಯೂ ಅಂತರಾತ್ಮನಾಗಿ ಚೈತನ್ಯ ಸ್ವರೂಪನಾಗಿ ಅಡಗಿಕೊಂಡು ಸರ್ವ ಜೀವರಾಶಿಗಳನ್ನೂ ಒಂದೇ ಸೂರ್ಯ, ಒಂದೇ ಗಾಳಿ, ಒಂದೇ ತರದ ನೀರು ಹಾಗೂ ಒಂದೇ ತರದ ಭೂಮಿಯ ಮೇಲೆ ಜೀವಿಸಲು ಪ್ರೇರೇಪಿಸಿರುವನು. ಆದ್ದರಿಂದ ನೀನು ಆ ಮತ, ಈ ಮತ, ಎಂಬ ಭೇದ ಭಾವವನ್ನು ಕಲ್ಪಿಸಿಕೊಳ್ಳಬೇಡ. ಜಗತ್ತಿಗೆಲ್ಲಾ ಒಂದೇ ಮತ. ಅದಾವುದೆಂದರೆ, ಪ್ರೇಮ ಮಾನವ ಕೋಟಿ ಸರ್ವಕ್ಕೂ ಒಂದೇ ಭಾಷೆ ಅದಾವುದೆಂದರೆ, ಹೃದಯ ಭಾಷೆ.

ಧರಿಸಿದರೆ ಅದು ಯಾವ ರೀತಿ ನಿನ್ನ ಹೊಟ್ಟೆನೋವಿನ ಭಾದ್ಯತೆಯ ನಿವಾರಣೆಗೆ ಸಹಾಯಕವಾಗುವುದಿಲ್ಲವೋ ತದೋ ರೀತಿ ನಿನ್ನ ಮನೆಯಲ್ಲಿ ಶಾಂತಿ ಇಲ್ಲದಿದ್ದರೆ ನಿನ್ನ ಜೀವಮಾನವೂ ಸಹ.

6. ನೀನು ಪ್ರಪಂಚದಲ್ಲಿ ಯಾವ ಕೆಲಸವನ್ನೇ ಮಾಡಿದರೂ ಅದಕ್ಕೆ ತಕ್ಕ ಪ್ರತಿಫಲವನ್ನು ಆಪೇಕ್ಷಿಸಿ ಮಾಡುವುದು ಸಹಜವಾಗಿದೆ. ನೀನು ಮಾಡತಕ್ಕಂತ ಕೆಲಸದಲ್ಲಿ ಯಾವುದಾಧರೂ ನಿನಗೆ ಜೀವನದ ಏಳಿಗೆಗೆ ಸಹಾಯಕವಾಗುವಂತಿದ್ದರೆ ಅದನ್ನು ಬುದ್ದಿಯಿಂದ ವಿಚಾರಿಸಿ ಕಾರ್ಯತ ಮಾಡುವೆ. ನಿನ್ನ ಬುದ್ದಿಯಿಂದ ಪರೀಕ್ಷಿಸಿದಲ್ಲಿ ಅದು ನಿಷ್ ಪ್ರಯೋಜನಕಾರಿಯಾಗಿ ಕಂಡು ಬಂದರೆ ಅದನ್ನು ಮಾಡದೆ ಬಿಟ್ಟು ಬಿಡುವೆ ಆದ್ದರಿಂದ ನೀನು ನಿನ್ನ ಯಾವ ಬುದ್ದಿಯಿಂದ ವಿಚಾರ ಪರಿಶೀಲನೆ ಮಾಡುವೆಯೋ ಅದೇ ಬುದ್ದಿಯಿಂದ ನೀನು ಪರರನ್ನು ಅನಾವಶ್ಯವಾಗಿ ದೂಷಿಸುವುದರಿಂದ ನಿನ್ನ ಜೀವಮಾನಕ್ಕೆ ಯಾವುದಾದರೂ ಸಹಾಯವಾಗುವುದೋ ಎಂಬುದಾಗಿ ಪರಿಶೀಲಿಸು. ಪ್ರಯೋಜನವಿಲ್ಲವೆಂದು ಕಂಡಲ್ಲಿ ಅದನ್ನು ಬಿಟ್ಟು ಬಿಡುವುದು ಉತ್ತಮವಲ್ಲವೆ ? ಇದು ಉತ್ತಮ ಮನುಷ್ಯನ ಲಕ್ಷಣ,

ಸಾಯಿ ಶಂಕರ.

ಪ್ರಕಾಶಕರು : ಪಿ. ಜಿ. ಕುಟ್ಟಪ್ಪ.

ಪ್ರಭಾತ್ ಪ್ರಿಂಟರ್ಸ್, ಮೈಸೂರು.

30/35

ಅಮೃತವಾಣಿ

ಭಗವಾನ್
ಶ್ರೀ ಸತ್ಯ ಸಾಯಿ ಬಾಬಾ

(ಪ್ರಶಾಂತಿ ನಿಲಯಂ, ಪುಟ್ಟಪರ್ತಿ)

ಇವರ ಉಪದೇಶ ರತ್ನಗಳು.

ಒಳ್ಳೆಯದನ್ನೇ ಮಾಡು, ಒಳ್ಳೆಯದನ್ನೇ ನೋಡು.
ಒಳ್ಳೆಯವನಾಗಿ ಬಾಳು, ದೇವರೊಳ್ಳೆಯವರಿಗೊಲಿವನು.

ಪ್ರೇಮದಿಂದ ಪ್ರಾರಂಭಿಸು ಪ್ರತಿ ದಿನವನ್ನು
ಪ್ರೇಮದಿಂದ ನಡೆ ನುಡಿ, ಪ್ರತಿ ದಿನದಲ್ಲು
ಪ್ರೇಮದಿಂದ ತುಂಬು, ಪ್ರತಿದಿನದ ಪ್ರತಿ ನಿಮಿಷ
ಪ್ರೇಮ ಮಾರ್ಗವೇ ದೇವರನ್ನು ಸೇರಿಸುವ ಮಾರ್ಗ

ಪ್ರೇಮವಿಲ್ಲದ ಬರಿಯ ಕರ್ತವ್ಯ ನಿಷ್ಠೆ – ಶೋಚನೀಯ
ಪ್ರೇಮದಿಂದ ಪ್ರೇರಿತ ಕರ್ತವ್ಯ ನಿಷ್ಠೆ – ಶ್ಲಾಘನಿಯ
ಪ್ರೇಮವೊಂದರಿಂದಲೇ ಪ್ರೇರಿತ ಕರ್ಮ – ದೈವೀಕ

ಆಡಿದಂತೆ ಮಾಡು, ಒಳಗೆ ಮಿಡಿದಂತೆ ಮಾತಾಡು.
ವಚಸ್ಯೇಕಂ, ಮನಸ್ಯೇಕಂ ಕರ್ಮಣ್ಯೇಕಂ – ಎಂದಿರು.
ಇದೇ ಸತ್ಯ ಮಾರ್ಗ, ಉತ್ತಮ ಪಥ ಮಾರ್ಗ

ಭಗವನ್ನಾಮ ಬರಿಯ ಶಬ್ದವಲ್ಲ, ಬಲದ ಚಿಲುಮೆ.
ಆನಂದದ ಉಗಮ; ಅಮೃತ ವಾಹಿನಿಯ ಗಂಗೋತ್ರಿ
ನಾಮ ಜಪಿಸುವವನ ಮುಂದು ನಾಮಿ ನಿಲುವನು
ನಾಮಿಯನು ನೆನೆದಾಗ, ನಾಮ ನಾಲಿಗೆಯಲಿ ನಲಿಯುವುದು.

[P.T.O.]

ದೇವನ ಬಳಿಗೇರುವ ಸೋಪಾನ – ಈ ಜೀವನ
ಜನನವೇ ಪಯಣದ ಪ್ರಥಮ. ಎಡೆ ಬಿಡದೆ
ಎದೆಗೆಡದೆ ಎಚ್ಚರ ದಿಂದೇರುವುದೇ ಜೀವನದ ಜೀವಾಳ
ಇನ್ನೆಷ್ಟು ಮೆಟ್ಟಿಲುಗಳು ಎಂದು ಕಣ್ಣಗ್ಗಬೇಡಿ
ಇನ್ನೆಷ್ಟೇ ಮೆಟ್ಟಿಲುಗಳು ಎಂದು ಹಿಗ್ಗಬೇಡಿ
ಸಾಕೆಂದು ಸೋಪಾನ, ಸಾಕದೇ ಆನಂದ ಸ್ಥಾನ

ಬಾಳೊಂದು ತುಂಬು ಹೊಳೆ, ಸಚ್ಚಿದಾನಂದ ಸಾಗರದೆಡೆ ಹರಿಯುತ್ತಿದೆ. ನಾವೆಲ್ಲ ಸೋದರ ಯಾತ್ರಿಕರು – ಸೋದರ ಮಾನವ, ಸೋದರ ಜಂತು ಜಾಲ, ಸೋದರ ಗಿಡ ಮರ, ಸೋದರ ಪಶು ಪಕ್ಷಿ, ಸೋದರ ದುಷ್ಟ ಸೋದರ ಶಿಷ್ಟ, ಸೋದರ ಸಾಧಕ ಸಿದ್ಧ.

ಸರ್ವರೊಂದಿಗೂ ಸ್ನೇಹ ಬಯಸು, ಅವರಿಂಗಿತವನ್ನರಿತು ಅವರಿಗೆ ಹಿತವನ್ನು ಕೋರು. ಪಶುಗಳಂತಾಗದಿರು; ಕನಿಕರದಿಂದ ಕರಗಿಸು ಆಂತಃಕರಣವನ್ನು; ಸಾಧನೆಯಿಂದ ಸಹನೆ ಸಮತ್ವಗಳನ್ನು ಸಾಧಿಸು. ಉಳಿಸಲು ಯತ್ನಿಸು; ಅಳಿಸಲು ಪ್ರಯತ್ನಿಸಬೇಡ. ಮಾಡ ಭೇದಗಳನ್ನು ಬಿಡು, ಅರಿತು ಅನ್ಯೋನ್ಯತೆಯನ್ನು ಬೆಳೆಸಿಬಾಳು.

ಪ್ರಕಾಶಕರು: ಜನರಲ್ ಕೆ. ಎಂ. ಕಾರಿಯಪ್ಪ (ನಿವೃತ್ತ)
"ರೋಷನಾರಾ", ಮಡಿಕೇರಿ, ಕೊಡಗು,
ಕರ್ನಾಟಕ.

ಕೊಡದೆ ಅವರನ್ನು ವಂಚಿಸಿ ಹಣ ಸಂಗ್ರಹಿಸಿ ತನ್ನ ಸ್ವಾರ್ಥಕ್ಕಾಗಿ, ಹೆಸರು ಪ್ರತಿಷ್ಠೆಗಳಿಗಾಗಿ ಕಟ್ಟಡಗಳನ್ನು ಕಟ್ಟಿಸುವುದು ಹಾಗೂ ಇನ್ನಿತರ ಬಹಿರಂಗವಾಗಿ ಮಾಡ ತಕ್ಕಂತ ವ್ಯವಹಾರವನ್ನು ಪರಮಾತ್ಮನು ಸರಿಯಾದ ದಾನವೆಂದು ಪರಿಗಣಿಸುವುದಿಲ್ಲ. ಈ ತರವಲ್ಲಿ ದಾನಮಾಡುವವರು ಕರ್ಮ ಬಂಧನಗಳಿಗೆ ಸಿಕ್ಕಿಕೊಳುವರು.

4. ನೀನು ದೇಹಕ್ಕೆ ಸಂಬಂಧವಾದ ಎಲ್ಲಾ ಪೋಷಣೆಗಳನ್ನು ಮಾಡುವೆ, ಅಂದರೆ ಹಸಿವಾದಾಗ ಊಟ ಮಾಡುವೆ, ಬಾಯಾರಿಕೆ ಆದಾಗ ನೀರು ಕುಡಿಯುವೆ. ಚಳಿಯಾದಾಗ ಉಣ್ಣೆ ಬಟ್ಟೆ, ಉಟ್ಟು ಕೊಳ್ಳುವೆ, ರೋಗರುಜಿನೆಗಳು ಬಂದಾಗ ವೈದ್ಯರ ಪತ್ತಿರ ಹೋಗಿ ಅದಕ್ಕೆ ತಕ್ಕ ಚಿಕಿತ್ಸೆ ಮಾಡಿಸಿಕೊಳ್ಳುವೆ. ಇಷ್ಟಲ್ಲಾ ನೀನು ದೇಹ ಪೋಷಣೆ ಮಾಡಿದರೂ ನಿನ್ನನ್ನು ಸದಾ ಕಾಡಿಸುತ್ತಿರುವ ಮನಸ್ಸಿನ ವಿಚಾರ ಪೋಷಿಸದಿರುವುದರಿಂದ ನೀನು ಸದಾ ಅಶಾಂತಿಯಿಂದ ತೊಳಲಾಡುವೆ. ದ್ದರಿಂದ ದೇಹ ಪೋಷಣೆಯ ಒಟ್ಟಿಗೆ ಮನಸ್ಸಿನ ಪೋಷಣೆಯೂ ಅವಶ್ಯ. ಲ್ಲದಿದ್ದರೆ ನಿನ್ನ ಜೀವಮಾನವು ವ್ಯರ್ಥವಾಗುವುದು. ನಿನ್ನ ಮನಸ್ಸನ್ನು ಪೋಷಿಸಬೇಕಾದರೆ ಮನಸ್ಸಿನ ವಿಚಾರವನ್ನು ತಿಳಿದಂತ ತತ್ವ ಜ್ಞಾನಿಗಳನ್ನು ಂದರ್ಶಿಸಿಯಾಗಲೀ ಅಥವಾ ಅವರು ಅನುಭವಿಸಿ ಬರೆದಂತ ಪುಸ್ತಕಗಳನ್ನು ಡಿಯಾಗಲೀ ನೀನು ನಿನ್ನ ಮನಸ್ಸನ್ನು ಪೋಷಿಸಿದೆಯಾದರೆ ನಿನ್ನ ಜತ್ವವನ್ನು ತಿಳಿದುಕೊಂಡು ನಿನ್ನ ಜೀವಮಾನಾವಧಿಯನ್ನು ಶಾಂತಿಯಿಂದ ಕೆಯುವೆ.

5. ನೀನು ಗೃಹಸ್ತನಾದಾಗ ನಿನ್ನ ಮನೆಯಲ್ಲಿ ಶಾಂತಿಯನ್ನು ಪಾಡಿಕೊಳ್ಳುವುದೇ ನಿನ್ನ ಧರ್ಮವಾಗಿದೆ. ಶಾಂತಿ ಸ್ಥಾಪಿಸಿಕೊಳ್ಳ ೀಕಾದರೆ ನೀನು ನಿನ್ನ ಸಂಸಾರದಲ್ಲಿ ಸರ್ವರೊಂದಿಗೂ ಪ್ರೀತಿಭಾವದಿಂದ ರ್ತಿಸಬೇಕು ನಿನ್ನ ಅಧಿಕಾರತ್ವವನ್ನು ಕಳೆದುಕೊಳ್ಳಬೇಕು. ಕಾರಣ ನ ಜೀವಮಾನದ ಮೂರರಲ್ಲಿ ಎರಡರಷ್ಟು ಪಾಲು ಸಂಸಾರದಲ್ಲೇ ಳೆಯಬೇಕಾಗಿದೆ. ಮನೆಯಲ್ಲಿ ಶಾಂತಿ ಸ್ಥಾಪನೆ ಮಾಡಿಕೊಳ್ಳದೆ ಮನೆಯ ಹೊರಗಡೆ ಸಾರ್ವಜನಿಕರೊಡನೆ ಎಷ್ಟು ವಿನಯದಿಂದ ವರ್ತಿಸಿದರೂ ಅದು ನಿಷ್ಪ್ರಯೋಜನವೇ ಸರಿ ಇದು ಹೇಗೆಂದರೆ ನೀನು ನಿನ್ನ ಹೊಟ್ಟೆಯೊಳಗೆ ಸರ್ವಕಾಲದಲ್ಲೂ ನಿನ್ನನ್ನು ಭಾದಿಸುತ್ತಿರುವ ರೋಗವನ್ನು ನಿವಾರಿಸಿಕೊಳ್ಳದೆ ಕೇವಲ ಬಹಿರಂಗ ಪ್ರದರ್ಶನಕ್ಕಾಗಿ ಅತೀ ಬೆಲೆ ಬಾಳತಕ್ಕಂತ ಉಡುಪನ್ನು

2. ಅಹಂಕಾರದಿಂದ ಆಕಾರ ಪ್ರಾಪ್ತಿಯಾಗುವುದು. ಅಹಂಕಾರವೇ ಆಕಾರಕ್ಕೆ ಮೂಲ. 'ಅಹಂ' ಎಂಬ ಪದದ ಅರ್ಥವೇ 'ನಾನು' ಎಂಬುವುದನ್ನು ಸೂಚಿಸುತ್ತದೆ. 'ನಾನು' ಎಂಬ ಪದವು ಆಕಾರವನ್ನು ಸೂಚಿಸುತ್ತದೆ. ನೀನು ಆಕಾರವನ್ನೇ ನಾನು ಎಂಬುದಾಗಿ ಗುರ್ತಿಸಿಕೊಂಡಿರುವ ತನಕ ಅಹಂಕಾರವೆಂಬ ಪ್ರತಿಬಿಂಭ ನಿನ್ನನ್ನು ಭಾದಿಸಿಕೊಂಡೇ ಇರುವುದು. ಅಹಂಕಾರವೆಂಬ ಪ್ರತಿಬಿಂಭ ನಿನಗೆ ಸ್ಥಿರಶಾಂತಿಯನ್ನು ಕೊಡದೆ ಈ ಮಾಯಾ ಜಗತ್ತಿನಲ್ಲಿ ನಿನ್ನನ್ನು ಭ್ರಾಂತನನ್ನಾಗಿ ಮಾಡಿ ನಿನ್ನ ಜೀವಮಾನವನ್ನು ಮೃಗಪಕ್ಷಿಗಳಿಗಿಂತಲೂ ಕಡೆಯಾಗಿ ಮಾಡಿ ಬಿಡುವುದು. ಭಗವಂತನು ಸರ್ವ ಜೀವಿಗಳನ್ನೂ ಸೃಷ್ಟಿಸಿ ಮಾನವ ಜೀವಿಗೆ ಉತ್ಕೃಷ್ಟವಾದ ಬುದ್ಧಿ ಶಕ್ತಿಯನ್ನು ಕೊಟ್ಟಿರುವನು ಹಾಗೂ ಒಬ್ಬರೊಬ್ಬರ ವ್ಯವಹಾರಗಳನ್ನು ಸ್ಪಷ್ಟವಾಗಿ ತಿಳಿಸುಕೊಳ್ಳಲು ಹಾಗೂ ತಿಳಿಸಿಕೊಡಲು ಮಾತಿನ ಮೂಲಕ ವ್ಯಕ್ತಪಡಿಸಲು ಹೆಚ್ಚಿನ ಶಕ್ತಿಕೊಟ್ಟಿರುವನು. ಈ ಉತ್ಕೃಷ್ಟವಾದ ಶಕ್ತಿಯನ್ನು ಉತ್ತಮ ಮಾರ್ಗಕ್ಕೆ ಉಪಯೋಗಿಸಿದ್ದೇ ಆದರೆ ನಿನ್ನಲ್ಲಿರುವ ದೈವತ್ವವನ್ನು ನಿನ್ನಲ್ಲಿ ನೀನೇ ಕಾಣುವೆ ಅದರ ಬದಲು ಈ ಉತ್ಕೃಷ್ಟ ಶಕ್ತಿಯನ್ನು ಪರರಲ್ಲಿ ದೋಷಗಳನ್ನು ಹುಡುಕುವುದಕ್ಕೂ ಹಾಗೂ ಪರರ ತಪ್ಪುಗಳನ್ನು ಹೇಳುತ್ತಾ ತಿರುಗುವುದರಲ್ಲಿ ವಿನಿಯೋಗಿಸಿದ್ದೇ ಆದರೆ ನಿನ್ನಲ್ಲಿರುವ ದೈವತ್ವವನ್ನು ನೀನು ಕಾಣಲಾರೆ, ಹಾಗೂ ಸರ್ವ ಕಾಲದಲ್ಲಿಯೂ ಬಂದಿಖಾನೆಯಲ್ಲಿರಿಸಿದ ಖೈದಿಯ ಜೀವಮಾನಕ್ಕಿಂತಲೂ ಅಸ್ವತಂತ್ರನಾಗಿ ಅಲ್ಲಸಲ್ಲದ ಆಲೋಚನೆಗಳಿಂದ ಬಂದಿತನಾಗಿ ಸರ್ವಕಾಲದಲ್ಲೂ ದುಃಖವನ್ನೊಳಗೊಂಡು ಜೀವಿತವನ್ನು ಕಳೆಯಬೇಕಾಗುವುದು. ಆದ್ದರಿಂದ ಪರರ ವಿಷಯದಲಿ ನೀನು ಜಾಗೃತನಾಗಿ ವರ್ತಿಸಿದ್ದೆ ಯಾದರೆ ನಿನಗೆ ಸರ್ವ ಸುಖ ಶಾಂತಿ ಪ್ರಾಪ್ತವಾಗುವುದು.

3. ದಾನ ಎಂದರೆ, 'ದಾ' ಎಂದರೆ ದಾರಿದ್ರ್ಯ 'ನ' ಎಂದರೆ ನಷ್ಟಪಡಿಸುವುದು ಅಥವಾ ಇಲ್ಲದೆ ಮಾಡುವುದು. ಮೊತ್ತದಲ್ಲಿ ದಾನ' ಎಂದರೆ ದಾರಿದ್ರ್ಯವನ್ನು ಇಲ್ಲದೆ ಮಾಡುವುದು ಆದ್ದರಿಂದ ಶ್ರೀಮಂತರು ಹಾಗೂ ಇತರ ತೋಟ, ಕಾರ್ಖಾನೆ ಇವೇ ಮೊದಲಾದ ವ್ಯವಹಾರಗಳ ಮಾಲೀಕರು ತಮ್ಮ ಕೈಕೆಳಗೆ ಸೇವಕರಾಗತಕ್ಕಂತ ಪರಮಾತ್ಮನ ಸಾಧು ಮಕ್ಕಳ ದಾರಿದ್ರ್ಯವನ್ನು ಪರಿಹರಿಸುವುದೇ ಸರಿಯಾದ ದಾನವಾಗಿದೆ. ಇವರಿಂದ ಪರಮಾತ್ಮನು ಬಹಳ ಸಂತುಷ್ಟಿ ಹೊಂದುವನು. ಇದರ ಬದಲು ಆ ಸಾಧು ಮಕ್ಕಳನ್ನೇ ವಂಚಿಸಿ ಅವರಿಗೆ ಸಲ್ಲಬೇಕಾದುದನ್ನು ಸರಿಯಾಗಿ